## ಮೈಸೂರು ರೆವಿನ್ಯೂ ಸರ್ವೆ ಮತ್ತು ಸೆಟ್ಲಮೆಂಟ್ ಡಿಪಾರ್ಟ್‌ಮೆಂಟ್.

### ಇಸ್ತಿಹಾರ್ನಾಮೆ.

ನಂ. 323, ತಾರೀಖು 20ನೆ ನವಂಬರು 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ತುಮಕೂರು ಡಿಸ್ಟ್ರಿಕ್ಟ್ ಪಾವಗಡ ತಾಲ್ಲೂಕಿನ 140 ಸರ ಕಾರಿ ಗ್ರಾಮಗಳ ರಿವಿಜ್ಡ್ ಸರ್ವೆ ಸೆಟ್ಲಮೆಂಟ್ ಆಕಾರದ ದರಗಳನ್ನು ಪ್ರಸಿದ್ಧಪಡಿಸುವಿಕೆಯು ಈಸಜಾ ಪಾವಗಡದ ವೊಕ್ತಾಂನಲ್ಲಿ ಬರುವ ತಿಂಗಳ (ಡಿಸೆಂಬರ್ 1909) 6ನೆ ತಾರೀಖು ಸೋಮವಾರ ಅಥವಾ ಆ ಷುಮಾರಿನಲ್ಲಿ ಪ್ರಾರಂಭಿಸಲ್ಪಡುವದು.

ಡಿ. ಶ್ಯಾಮರಾವ್,
ಸೂಪರ್‌ಟೆಂಡೆಂಟ್, ಮೈಸೂರು ರೆವಿನ್ಯೂ ಸರ್ವೆ ಮತ್ತು ಸೆಟ್ಲಮೆಂಟ್.

## ಬೆಂಗಳೂರು ಡಿಸ್ಟ್ರಿಕ್ಟ್.

### ಇಸ್ತಿಹಾರ್.

ಸರ್ಕಾರಕ್ಕೆ ಬರಬೇಕಾದ ಬಾಕಿಗಾಗಿ ನೆಲವಂಗಲ ತಾಲ್ಲೂಕು ದಾಸನಪುರದ ಹೋಬಳಿ ಜೋಡಿ ಕಂಸಂದ್ರ ಗ್ರಾಮವು 1909ನೆ ಇಸವಿ ಡಿಸೆಂಬರು 29ನೆ ತಾರೀಖಿನಲ್ಲಿ ನೆಲವಂಗಲ ತಾಲ್ಲೂಕು ಕಛೇರಿಯಲ್ಲಿ ಬಹಿರಂಗವಾಗಿ ಹರಾಜು ಹಾಕಲ್ಪಡುತ್ತೆ.

(ಷರಾ—ಹೆಚ್ಚು ತಪಶೀಲ್ ಬಗ್ಯೆ 1909ನೆ ಇಸವಿ ಡಿಸೆಂಬರ್ 2ನೆ ಮುರ್ಕುಂ ಮೈಸೂರು ಗೆಜೆಟ್ಟಿನ 2ನೆ ಭಾಗದ 878–879ನೆ ಪುಟದಲ್ಲಿ ಪ್ರಾಯಿಷ್ ಆಗಿರುವ ಇಸ್ತಿಹಾರ್‌ನಾಮೆಯನ್ನು ನೋಡಬಹುದು.

ಟಿ. ರಾಯಲು ಜೆಟ್ಟಿ,
ಥರ್ ಡೆಪ್ಯುಟಿ ಕಮಿಷನರ್.

## ಕೋಲಾರ ಡಿಸ್ಟ್ರಿಕ್ಟ್.

### ಇಸ್ತಿಹಾರ್ನಾಮೆ.

ತಾರೀಖು 17ನೆ ನವಂಬರ್ 1909.

ಚಿಕ್ಕಬಳ್ಳಾಪುರ ತಾಲ್ಲೂಕು ವಂಡಿಕಲ್ಲು ಹೋಬಳಿಗೆ ಸೇರಿದ ಕಾಯಂಗುತ್ತಾ ಚೀಗಾನಹಳ್ಳಿ ಗ್ರಾಮವು ಸರ್ಕಾರಕ್ಕೆ ಬರ ಬೇಕಾದ ಬಾಕಿಗೋಸ್ಕರವಾಗಿ ಚಿಕ್ಕಬಳ್ಳಾಪುರ ತಾಲ್ಲೂಕು ಕಛೇರಿಯಲ್ಲಿ ಚಿಕ್ಕಬಳ್ಳಾಪುರ ಸಬ್ ಡಿವಿಜ್ ಆಫಿಸರವರ ರೂಬರೂ ಬು 1909ನೆ ಡಿಸೆಂಬರ್ ಮಾಹೆ 20ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸ ಲ್ಪಟ್ಟು ಇದೆ.

ಹೆಚ್ಚು ತಪಶೀಲ್ ಬಗ್ಯೆ 1909ನೆ ಇಸವಿ ನವಂಬರ್ 25ನೆ ಮುರ್ಕುಂ ಮೈಸೂರು ಗೆಜೆಟ್ಟಿನ 2ನೆ ಭಾಗದ 869–870ನೆ ಪೇಜುಗಳನ್ನು ನೋಡತಕ್ಕದ್ದು.

ಎ. ವೇದಾಂತದೇಶಿಗಂ ಐಯ್ಯಂಗಾರ್, ಥರ್ ಡೆಪ್ಯುಟಿ ಕಮಿಷನರ್.

## ಹಾಸನ ಡಿಸ್ಟ್ರಿಕ್ಟ್.

### ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ನ ಪ್ರಸಿದ್ಧಪತ್ರಿಕೆ.

ತಾರೀಖು 29ನೆ ನವಂಬರ್ 1909.

1. ಕಂದಾಯದ ಬಾಕೀದಾರರಾದ ರಾಮಕೃಷ್ಣಯ್ಯ ಕೋದಂಡನ್ನ ಸುಬ್ಬಕೆಟ್ಟಿಯಿಂದ ಬರಬೇಕಾದ ಜಮೀರ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಹಾಸನ ಡಿಸ್ಟ್ರಿಕ್ಟ್ ಬೇಲೂರು ತಾಲ್ಲೂಕು ಶಿರಗುರ ಗ್ರಾಮದಲ್ಲಿ ಬೇಲೂರು ತಾ ಲ್ಲೂಕು ಅಮಲ್ದಾರ್ರಿಂದ 1910ನೆ ಜನವರಿ 31ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿ ಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1908—09ನೆ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ವೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ವೇರಿಗೆ ರೂಪಾಯಿ 803—0—8 ಆಗಿರುತ್ತೆ.